# ವಾಜಪೇಯಿ ಬದುಕಿಗೆ ಕನ್ನಡಿ

‘ಮೈ ಅಟಲ್ ಹೂಂ’ ಹಿಂದಿ ಸಿನಿಮಾದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ದಿವಂಗತ ಅಟಲ್ ಬಿಹಾರಿ ವಾಜಪೇಯಿ ಅವರ ಪಾತ್ರದಲ್ಲಿ ಪಂಕಜ್ ತ್ರಿಪಾಠಿ ಅಭಿನಯಿಸಿದ್ದಾರೆ. ಅಟಲ್ ಪಾತ್ರಕ್ಕೆ ಅವರು ರೂಪಾಂತರವಾಗಿರುವ ರೀತಿಯನ್ನು ಅನೇಕರು ಮೆಚ್ಚಿಕೊಂಡಿದ್ದಾರೆ.

ರಿಶಿ ವೀರಮಣಿ ಹಾಗೂ ರವಿ ಜಾದವ್ ಚಿತ್ರಕತೆ ಸಿದ್ಧಪಡಿಸಿರುವ ಚಿತ್ರವಿದು. ರವಿ ಜಾಧವ್ ನಿರ್ದೇಶನದ ಹೊಣೆಯನ್ನೂ ಹೊತ್ತಿದ್ದಾರೆ. ಮೂರು ಅವಧಿಗೆ ಪ್ರಧಾನಿ ಆಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರ ಬಾಲ್ಯದ ದೃಶ್ಯಾವಳಿಗಿಂತ ಅವರು ಜನನಾಯಕರಾಗಿ ರೂಪುಗೊಂಡ ಬಗೆಯ ಹೂರಣ ಸಿನಿಮಾದಲ್ಲಿ ಇದೆ. ಟ್ರೈಲರ್ ನೋಡಿದರೆ ವಾಜಪೇಯಿ ಅವರ ಕವಿಹೃದಯ, ಹಾಸ್ಯಪ್ರಜ್ಞೆಗೆ ಕನ್ನಡಿ ಹಿಡಿಯುವ ದೃಶ್ಯಗಳೂ ಇರುವುದು ಸ್ಪಷ್ಟ. ಸಲೀಂ–ಸುಲೇಮಾನ್ ಸಂಗೀತ ನೀಡಿರುವ ಈ ಸಿನಿಮಾ ಜನವರಿ 19ರಂದು ತೆರೆಕಾಣಲಿದೆ.

‘ಸಿನಿಮಾಗಿಂತ ಹೆಚ್ಚಾಗಿ ಅಟಲ್ ಜೀ ಅವರ ಪಾತ್ರಧಾರಿಯಾಗಿ ಅಭಿನಯಿಸಿದ ನನ್ನ ಪಯಣವೇ ಆಸಕ್ತಿಕರವಾಗಿತ್ತು. ನನ್ನ ಹೃದಯಕ್ಕೆ ಹತ್ತಿರವಾದ ವಿಷಯವಿದು. ಸ್ಫೂರ್ತಿದಾಯಕ ವ್ಯಕ್ತಿತ್ವದ ಕತೆಯನ್ನು ಜಗತ್ತಿಗೆ ಹೇಳುವುದು ಹೆಮ್ಮೆಯ ವಿಷಯ. ನಮ್ಮ ಪ್ರಯತ್ನವನ್ನು ಪ್ರೇಕ್ಷಕರು ಕೂಡ ಮೆಚ್ಚಿಕೊಳ್ಳುವರು ಎನ್ನುವ ವಿಶ್ವಾಸವಿದೆ’ ಎಂದು ಪಂಕಜ್ ತ್ರಿಪಾಠಿ ಪ್ರತಿಕ್ರಿಯಿಸಿದರು.

‘ನಟರಂಗ್’ ಮರಾಠಿ ಸಿನಿಮಾ ನಿರ್ದೇಶಿಸಿ, ಸದ್ದು ಮಾಡಿದ್ದ ರವಿ ಜಾಧವ್ ಅವರಿಗೆ ಅಟಲ್ ವ್ಯಕ್ತಿತ್ವಕ್ಕೆ ಸಶಕ್ತವಾಗಿ ಕನ್ನಡಿ ಹಿಡಿಯುವ ಪ್ರಯತ್ನವನ್ನು ತಾವು ಮಾಡಿರುವ ತೃಪ್ತಿ ಇದೆ. ■



ಅಟಲ್ ಬಿಹಾರಿ ವಾಜಪೇಯಿ ಆಗಿ ಪಂಕಜ್ ತ್ರಿಪಾಠಿ



# ಗೋಟ್ ಸ್ಟಾರ್ ಕಲಾವಿದರ ಸಹಪಯಣದ ಬೋಟ್

ಮೀನಾಕ್ಷಿ ಚೌಧರಿ, ಪ್ರಭುದೇವ, ಪ್ರಶಾಂತ್, ಲೈಲಾ, ಸ್ನೇಹ, ವೈಭವ್ – ಇವರೆಲ್ಲ ಒಂದೇ ಸಿನಿಮಾದಲ್ಲಿ! ಸಿನಿಮಾದ ನಾಯಕ ತಲಪತಿ ವಿಜಯ್. ಈ ಚಿತ್ರದಲ್ಲಿಯೂ ಅವರದ್ದು ದ್ವಿಪಾತ್ರ.

ಇಷ್ಟು ದೊಡ್ಡ ತಾರಾಗಣ ಇರುವ ಚಿತ್ರವನ್ನು ವೆಂಕಟ್ ಪ್ರಭು ನಿರ್ದೇಶಿಸುತ್ತಿದ್ದಾರೆ. ಸಿನಿಮಾದ ಶೀರ್ಷಿಕೆ G.O.A.T. ಇದನ್ನು ವಿಸ್ತರಿಸಿ ಬರೆದರೆ ಏನು ಆಗುತ್ತದೆ? ‘ಗ್ರೇಟೆಸ್ಟ್ ಒನ್ ಅಕ್ರಾಸ್ ಟೈಮ್ಸ್’ ಎಂದಾಗುತ್ತದೆ. ಇದೊಂದು ಟೈಮ್ ಟ್ರಾವೆಲರ್ ಸಿನಿಮಾ ಆಗಿದ್ದು, ದೊಡ್ಡ ಭಿತ್ತಿಯಲ್ಲಿ ಕತೆ ಹೇಳಲಾಗುತ್ತದೆ ಎಂದಷ್ಟೆ ನಿರ್ದೇಶಕರು ತಿಳಿಸಿದ್ದಾರೆ.

‘ಬಾಸ್’, ‘ಪಜಲ್’ ಎಂದು ಈ ಚಿತ್ರಕ್ಕೆ ಹೆಸರಿಡಲಿದ್ದಾರೆ ಎಂಬ ಊಹಾಪೋಹಗಳು ಇದ್ದವು. ಈಗ ಅಧಿಕೃತವಾಗಿ ಶೀರ್ಷಿಕೆ ಏನೆಂದು ಹೊರಬಿದ್ದಿದೆ.

ಸಿನಿಮಾ ಚಿತ್ರೀಕರಣ ಅಕ್ಟೋಬರ್‌ನಲ್ಲೇ ಶುರುವಾಗಿದೆ. ರಾಜು ಸುಂದರಂ ನೃತ್ಯ ನಿರ್ದೇಶನದಲ್ಲಿ ಹಾಡೊಂದಕ್ಕೆ ವಿಜಯ್ ಹೆಜ್ಜೆ ಹಾಕಿದ್ದಾರೆ. ಹಾಡುಗಳಿಗೆ ಸ್ವರ ಸಂಯೋಜನೆ ಯುವನ್ ಶಂಕರ್ ರಾಜಾ ಅವರದು. ದಶಕಗಳ ನಂತರ ವಿಜಯ್ ಚಿತ್ರಕ್ಕೆ ಅವರು ಸಂಗೀತ ನಿರ್ದೇಶನ ಮಾಡುತ್ತಿರುವುದು ವಿಶೇಷ. ಇತ್ತೀಚೆಗೆ ಅನಿರುದ್ಧ್ ರವಿಚಂದರ್ ಸಂಗೀತ ಸಂಯೋಜನೆಯೇ ವಿಜಯ್ ಚಿತ್ರಗಳಿಗೆ ಹೆಚ್ಚಾಗಿ ಇರುತ್ತಿತ್ತು. ವಿಜಯ್ ಅವರ 68ನೇ ಸಿನಿಮಾ ಇದಾಗಿದ್ದು, ಅವರ ಗೆಲುವಿನ ಫಾರ್ಮ್ ಮುಂದುವರಿಯುವ ನಿರೀಕ್ಷೆ ಅಭಿಮಾನಿಗಳಿಗೆ ಇದೆ. ಚಕಚಕನೆ ಮೊದಲ ಹಂತದ ಚಿತ್ರೀಕರಣ ಮುಗಿಸಿ, ಒಂದು ಸಣ್ಣ ಬ್ರೇಕ್ ತೆಗೆದುಕೊಳ್ಳಲಿದೆ ಚಿತ್ರತಂಡ.

ಮೊದಲು ಈ ಚಿತ್ರವನ್ನು ಅಟ್ಲಿ ನಿರ್ದೇಶನ ಮಾಡಲಿದ್ದಾರೆ ಎನ್ನಲಾಗಿತ್ತು. ಈಗ ವೆಂಕಟ ಪ್ರಭು ಆ ಜಾಗಕ್ಕೆ ಬಂದಿದ್ದಾರೆ. ‘ಬಿರಿಯಾನಿ’, ‘ಮಾಸ್’, ‘ಮಾನಾಡು’ – ಈ ಮೂರೂ ಚಿತ್ರಗಳನ್ನು ವೆಂಕಟ ಪ್ರಭು ನಿರ್ದೇಶಿಸಿದ್ದರು. ಎಲ್ಲವೂ ಹಿಟ್ ಆಗಿದ್ದವು. ‘ಬಿರಿಯಾನಿ’ಯಲ್ಲಿ ಕಾರ್ತಿ, ‘ಮಾಸ್’ ಚಿತ್ರದಲ್ಲಿ ಸೂರ್ಯ ಹಾಗೂ ‘ಮಾನಾಡು’ ಸಿನಿಮಾದಲ್ಲಿ ಸಿಂಬ ನಾಯಕರಾಗಿದ್ದರು. ಅವರ ಯಶಸ್ಸಿನ ಗ್ರಾಫ್ ಈಗ ವಿಜಯ್ ಅವರೂ ನೆಚ್ಚಿಕೊಳ್ಳಲು ಕಾರಣವಾಗಿದೆ. ಕಳೆದ ವರ್ಷ ವಿಜಯ್ ಅಭಿನಯದ ‘ಲಿಯೋ’ ಸಿನಿಮಾ ಬಾಕ್ಸ್ ಆಫೀಸ್ ಕಲೆಕ್ಷನ್‌ನಲ್ಲಿ ಉತ್ತಮ ಫಲಿತಾಂಶ ಕಂಡಿತ್ತು. ■